ಸಿ ಎಸ್.ಐ. ಪತ್ರ ಬರೆದುದಲ್ಲದೇ ಮುಖತಃ ವಿಚಾರ ತಿಳಿಸಿದ್ದೆ. ಇಷ್ಟಾದರೂ ಇವತ್ತಿನ ತನಕ ಯಾವುದೇ ಕ್ರಮ ಕೈಗೊಂಡಿಲ್ಲ. ತಾರೀಕು ೧೭-೯-೧೯೯೯ ರಂದು (ಸೋಮವಾರ) ರಾತ್ರಿ ಹೊಸ ಅಕ್ಕಿ ಊಟಕ್ಕೆಂದು ಕೊಲೆಯಾದ ರಾಮಗೌಡ ಮತ್ತು ಅವನ ಪತ್ನಿ ಶ್ರೀಮತಿ ಪಾಚು ಯಾನೆ ಜಾನಕಿ ಎಂಬುವಳು ಮಕ್ಕಳ ಸಹಿತ ಹೆಂಡತಿಯ ಪ್ರೇರಣೆಯಂತೆ ಮಕ್ಕಳನ್ನು ಒತ್ತಾಯದಿಂದ ಅಲ್ಲಿ ಮಲಗಿಸಿ (ಮ್ಯಾಲಗೌಡರಲ್ಲಿ) ಸುಮಾರು ೧೨ ಗಂಟೆಯ ಸಮಯ (ರಾತ್ರಿ) ರಾಮೇಗೌಡ ಹಾಗೂ ಅತನ ಪತ್ನಿ ಇಬ್ಬರೂ ಅವರ ಮನೆಗೆ ಹೊರಟುಹೋದರು. ಇವರಿಬ್ಬರೂ ಮನೆ ಮುಟ್ಟಿದ ಸ್ವಲ್ಪ ಸಮಯದಲ್ಲಿ ನಂದಿಲ ಬಾಲು ಮಲೆ ಕುಡಿಯನ ಮಗ ಶೇಷ ಮಲೆ ಕುಡಿಯನು ಶರಾಬು ಕುಡಿದು ಹಾಜರಾಗುತ್ತಾನೆ ಶೇಷ ಮಲೆಕುಡಿಯನಿಗೂ, ರಾಮಗೌಡನ ಹೆಂಡತಿ ಶ್ರೀಮತಿ ಪಾಚು ಯಾನೆ ಜಾನಕಿಗೂ ಅನೈತಿಕ ಸಂಬಂಧವಿತ್ತೆಂದೂ ಊರಲ್ಲಿ ವದಂತಿ. ತಂದ ಶರಾಬನ್ನು ಮೂವರೂ ಹಂಚಿಕುಡಿದಾಗ ನಂತರ ಶೇಷ ಮಲೆಕುಡಿಯ ಹಾಗೂ ಶ್ರೀಮತಿ ಪಾಚು ಯಾನೆ ಜಾನಕಿ ಎಂಬುವರು ಸೇರಿ ರಾಮಗೌಡನನ್ನು ಕಡಿದು ಕೊಲೆಮಾಡಿದ್ದು ಹೆಣವನ್ನು ಅದೇ ದಿನ ರಾತ್ರಿ ಈಚಲು ಮಜಲು ಹಳೇ ತೋಟದ ಪಕ್ಕ ನೆಕ್ಕರೆಮಾರಿ ನಲ್ಲಿ ಹಲಸಿನ ಮರದ ಅಡಿಯಲ್ಲಿ ಕೊಲೆಗಾರರಿಬ್ಬರೂ ಸೇರಿ ಹುಗಿದಿರುತ್ತಾರೆ.

ಮೂರನೇ ದಿನ ಬೆಳಿಗ್ಗೆ ಮ್ಯಾಲಗೌಡನ ಹೆಂಡತಿ ಶ್ರೀಮತಿ ಗಿರಿಯಮ್ಮ ಯಾನೆ ನೀಲಮ್ಮ ಎಂಬುವರು ಮೃತ ರಾಮಗೌಡನ ಮಕ್ಕಳನ್ನು ಅವರ ಮನೆಗೆ ಕರೆದುಕೊಂಡು ಹೋದಾಗ ಶ್ರೀಮತಿ ಪಾಚು ಯಾನೆ ಜಾನಕಿಯು ಕೊಲೆ ಮಾಡಿದ ಸಂದರ್ಭದಲ್ಲಿ ನೆಲದಲ್ಲಿ ಬಿದ್ದ ಹಾಗೂ ಗೋಡೆಗೆ ಚಿಮ್ಮಿದ ರಕ್ತವನ್ನು ಮರೆಮಾಚಲು ಸಗಣಿಯನ್ನು ಸಾರಿಸುತ್ತಿದ್ದಳು. ಶ್ರೀಮತಿ ಗಿರಿಯಮ್ಮ ಯಾನೆ ನೀಲಮ್ಮ ವಿಚಾರಿಸಿದಾಗ ಎರಡು ನಾಯಿಗಳು ಬಂದು ಕಚ್ಚಾಡಿದವು ಅವುಗಳನ್ನು ಓಡಿಸಲು ನಾನು ಕತ್ತಿಯನ್ನು ಬಿಸಾಡಿದೆ. ಆಗ ಒಂದು ನಾಯಿಗೆ ಕತ್ತಿಯು ತಾಗಿ ರಕ್ತವೆಲ್ಲಾ ನೆಲಕ್ಕೆ ಹಾಗೂ ಗೋಡೆಗೆ ಚಿಮ್ಮಿತು. ಅದಕ್ಕಾಗಿ ಸಗಣಿ ಸಾರಿಸುತ್ತಿದ್ದೇನೆ ಎಂದು ಶ್ರೀಮತಿ ಪಾಚು ಯಾನೆ ಜಾನಕಿಯು ತಿಳಿಸಿದಳು.

ಈ ವಿಚಾರ ಇಡೀ ಊರವರಿಗೆ ತಿಳಿದಿದ್ದರೂ ಈ ವಿಚಾರವನ್ನು ಉಪ್ಪಿನಂಗಡಿಯ ಪಿ ಎಸ್.ಐ. ಗೆ ತಿಳಿಸಿದ್ದರೂ ಅಲ್ಲದೇ ಶ್ರೀಮತಿ ಪಾಚು ಯಾನೆ ಜಾನಕಿಯು ಸಬ್‌ಇನ್‌ಸ್ಪೆಕ್ಟರ್‌ರವರಲ್ಲಿ ನಡೆದು ಸಂಗತಿಯನ್ನು ಒಪ್ಪಿಕೊಂಡಿದ್ದರೂ ಕೂಡ ಇವತ್ತಿನವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಶ್ರೀಮತಿ ಪಾಚು ಯಾನೆ ಜಾನಕಿಯು ರೂಪವತಿಯಾಗಿದ್ದು ಪದರ ಉಪ್ಪಿನಂಗಡಿ ಎಸ್.ಐ. ಗೂ ಅವಳಿಗೂ ಅನೈತಿಕ ಸಂಬಂಧ ಇದೆಯೆಂದು ಜನರಾಡಿಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ಉಪ್ಪಿನಂಗಡಿ ಪಿ.ಎಸ್. ಐ. ಅನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಸಿ. ಬಿ. ಡಿ. ತನಿಖೆ ನಡೆಸಬೇಕಾಗಿ ಈ ಮೂಲಕ ಮಾನ್ಯ ಗೃಹ ಮಂತ್ರಿಯವರಲ್ಲಿ ನಾನು ವಿನಂತಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆದಿರುವುದು ೧೭-೯-೧೯೯೯ರಲ್ಲಿರಲ್ಲಿ. ಮಾನ್ಯ ಸದಸ್ಯರು ಇಪ್ಪತ್ತು ಈ ವಿಷಯವನ್ನು ನನ್ನ ಗಮನಕ್ಕೆ ತಂದು ಆ ಸಬ್ ಇನ್‌ಸ್ಪೆಕ್ಟರ್ ಅವರನ್ನು ಸಸ್ಪೆಂಡ್ ಮಾಡಿ ಇದನ್ನು ಸಿ. ಓ. ಡಿ. ತನಿಖೆಗೆ ಒಪ್ಪಿಸಿ ಎಂದು ಹೇಳಿದ್ದಾರೆ. ಬಹುಶಃ ನಾನು ವಿವರಗಳನ್ನು ತರಿಸಿಕೊಂಡು ನಿಜವಾಗಿಯೂ ಈ ಘಟನೆ ನಡೆದಿದ್ದರೆ ಇದನ್ನು ಸಿ.ಓ. ಡಿ. ಗೆ ಒಪ್ಪಿಸುತ್ತೇನೆ. ಇಲ್ಲದೇ ಇದ್ದರೆ, ಬೇರೆ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡಿದ್ದರೆ ಇದನ್ನು ಇಷ್ಟಕ್ಕೇ ನಿಲ್ಲಿಸಬೇಕಾಗಿ ಬರುತ್ತದೆ ಎಂದು ಹೇಳುತ್ತೇನೆ.

(೪) ಸರ್ಕಾರಿ ವಿಮಾ ಇಲಾಖೆಯಲ್ಲಿ ಲಕ್ಷಾಂತರ ರೂಪಾಯಿಗಳ ಮಂಚನೆ ಪ್ರಕರಣಗಳು

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸರಕಾರದ ಜೀವ ವಿಮಾ ಇಲಾಖೆಯಲ್ಲಿ ವಿಮಾ ಪಾಲಿಸಿಗಳ ಮೇಲೆ ಸಾಲ ನೀಡಿರುವ ಸಂಬಂಧದಲ್ಲಿ ಲಕ್ಷಾಂತರ ರೂಪಾಯಿ ಮಂಚನೆ ಪ್ರಕರಣಗಳು ಬೆಳಕಿಗೆ ಬಂದಿದ್ದು ಸರಕಾರಿ ನೌಕರರು ಹಾಗೂ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿರುವುದು ಕಂಡುಬಂದಿದ್ದು, ಈ ವಿಷಯದಲ್ಲಿ ಸರ್ಕಾರದ ಕಾರ್ಯಾಚರಣೆ ವಿಫಲವಾಗಿದ್ದು ಈ ವಿಷಯವನ್ನು ಕೆ.ಜಿ.ಐ.ಡಿ. ನೌಕರರ ಸಂಘದವರು ಎರಡು ವರ್ಷಗಳ ಹಿಂದೆಯೇ ಮುಖ್ಯಮಂತ್ರಿಯವರಿಗೆ ಎರಡು ಬಾರಿ ಮನವಿ ಮಾಡಿಕೊಂಡಾಗ್ಯೂ ಇದನ್ನು ಸರಿಪಡಿಸಲು ಹಾಗೂ ತನಿಖೆ ಮಾಡಲು ಸರ್ಕಾರ

ವಿಫಲಗೊಂಡಿದೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಈ ವಿಷಯದಲ್ಲಿ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಅಥವಾ ಇದನ್ನು ಲೊಕಾಯುಕ್ತರಿಗೆ ಒಪ್ಪಿಸ ಬೇಕಾಗಿ ಕೇಳಿಕೊಂಡು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಿಂದ ಈ ವಿಷಯದ ಬಗ್ಗೆ ಹೇಳಿಕೆ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು). —ಈ ವಿಷಯ ಈ ದಿನದ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶಾಸನರಚನಾ ಕಾರ್ಯಕಲಾಪಗಳು

೧೯೮೬ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶದೊಳಗೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶದೊಳಗೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕ್ ಪಂಚಾಯತ್ಸ್ ಸಮಿತಿ, ಪಂಂಡ್ಸ್ ಪಂಚಾಯತ್ಸ್ ನ್ಯಾಯಾ ಪಂಚಾಯತ್ಸ್ ಆಕ್ಟ್ ೧೯೮೩, ಇದರ ಪ್ರಕಾರ ಲೋಕಲ್ ಏರಿಯಾವನ್ನು ಇಲ್ಲಿ ಡಿಫೈನ್ ಮಾಡಿದ್ದೇವೆ. ಪಂಚಾಯತ್ ಆಕ್ಟ್ ಪ್ರಕಾರ ೭೭ ಮುನಿಸಿಪಾಲಿಟಿ ಗಳನ್ನು ತೆಗೆದಿದ್ದೇವೆ. ಅದನ್ನು ಸೇರಿಸಬೇಕು ಎಂದು ಹೇಳಿ ಇದರಲ್ಲಿ ತಂದಿರುವುದು. ಇದು ದೊಡ್ಡ ವಿಚಾರವೇನೂ ಅಲ್ಲ. ಆದ್ದರಿಂದ ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೬ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨

ಅಧ್ಯಕ್ಷರು.—"ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ